ನಿರ್ದೇಶನದಂತೆ ಸದರಿ ಕಾಮಗಾರಿ ಗುತ್ತಿಗೆಯನ್ನು ರದ್ದುಪಡಿಸಲಾಗಿದ್ದು, ಹಾಲಿ ಅಪೂರ್ಣ ಮನೆಗಳನ್ನು ಹೇಗಿದೆಯೋ ಹಾಗೆ ಹಂಚಿಕೆ ಮಾಡಲು ಮಂಡಳಿ ನೀಡಿದ ನಿರ್ದೇಶನದಂತೆ ಹಂಚಿಕೆ ಕ್ರಮಕ್ಕೆಗೊಳ್ಳಲಾಗಿದೆ.

ಉ) ಗುತ್ತಿಗೆದಾರರಿಗೆ ವಹಿಸಲಾಗಿದ್ದ ಮನೆ ನಿರ್ಮಾಣ ಕಾಮಗಾರಿಯನ್ನು ಸಕಾಲದಲ್ಲಿ ಪೂರ್ಣಗೊಳಿಸುವಲ್ಲಿ ಗುತ್ತಿಗೆದಾರರು ವಿಫಲರಾಗಿರುತ್ತಾರೆ. ಈ ಕಾಮಗಾರಿ ವಿಫಲತೆಗೆ ಗುತ್ತಿಗೆದಾರರಾದ ಮೆ: ಧನಲಕ್ಷ್ಮಿ ಕನ್ಸ್‌ಟ್ರಕ್ಷನ್ಸ್‌ರವರು ಕಾರಣರಾಗಿದ್ದಾರೆ. ಈ ಗುತ್ತಿಗೆದಾರರ ಮೇಲೆ ಕೈಗೊಂಡ ಕ್ರಮದ ವಿವರ ಕೆಳಕಂಡಂತಿದೆ.

1. ದಿನ ಒಂದಕ್ಕೆ ರೂ. 5-00 ರಂತೆ ದಂಡವನ್ನು ದಿನಾಂಕ:7-7-1992 ರಿಂದ ದಿನಾಂಕ: 30-11-1994 ರವರೆಗೆ ಕಾಲ ವಿಸ್ತರಣೆ ಮಾಡಿರುವ ಅವಧಿಗೆ ದಂಡವನ್ನು ವಿಧಿಸಲಾಗಿದೆ.

2. ಬ್ಯಾಂಕ್ ಗ್ಯಾರಂಟಿ ಹಣ ರೂ. 16.70 ಲಕ್ಷಗಳನ್ನು ಮಂಡಳಿ ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆ.

3. ಮಂಡಳಿಯಲ್ಲಿರುವ ಗುತ್ತಿಗೆದಾರರ ಎಫ್.ಎಸ್.ಡಿ. ಹಣ ರೂ. 6,64,314/-ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಹಾಗೂ ಎಫ್.ಎಸ್.ಡಿ. ಯಿಂದ ಬಂದ ಬಡ್ಡಿ ಹಣ ರೂ. 75,589/- ಸಹ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

4. ಮಂಡಳಿಯಲ್ಲಿರುವ ಗುತ್ತಿಗೆದಾರರ ಇ.ಎಂ.ಡಿ.ಹಣ ರೂ. 2,12,750/- ನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಗುತ್ತಿಗೆದಾರರಿಂದ ಒಟ್ಟು ರೂ. 26,22,653/- ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ರಾಜ್ಯದಲ್ಲಿ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ವಿತರಣೆ

4572 (4825) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಲಿ ಓದುತ್ತಿರುವ ಮಕ್ಕಳ ಪೈಕಿ ಯಾವ ತರಗತಿಯಿಂದ ಯಾವ ತರಗತಿಯವರೆಗಿನ ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ಉಚಿತವಾಗಿ ನೀಡುವ ಯೋಜನೆ ಇದೆ:

ಆ) ಪಠ್ಯ ಪುಸ್ತಕಗಳನ್ನು ಯಾವ ಯಾವ ಜಿಲ್ಲೆಯಲ್ಲಿನ ಯಾವ ಯಾವ ಶಾಲೆಗಳ ಎಷ್ಟೆಷ್ಟು ಮಕ್ಕಳಿಗೆ ನೀಡಲಾಗುತ್ತಿದೆ, ತಿಳಿಸುವುದು: ಇದಕ್ಕಾಗಿ ತಗಲುವ ವೆಚ್ಚ ಎಷ್ಟು?

ಇ) ನೀಡಲಾಗುತ್ತಿರುವ ಪಠ್ಯ ಪುಸ್ತಕಗಳ ಪೈಕಿ ಯಾವ ಯಾವ ವಿಷಯದ ತರಗತಿಯ ಪಠ್ಯ ಪುಸ್ತಕಗಳು ಇನ್ನೂ (ಜುಲೈ ಮಾಹೆಯಾದರೂ) ಯಾವ ಯಾವ ಜಿಲ್ಲೆಯ ಯಾವ ಯಾವ ಶಾಲೆಯ ಎಷ್ಟು ಮಕ್ಕಳಿಗೆ ತಲುಪಿಲ್ಲ.

ಈ) ಈ ವಿಳಂಬಕ್ಕೆ ಕಾರಣಗಳೇನು: ವಿಳಂಬ ತಪ್ಪಿಸಲು ಕೈಗೊಂಡ ಕ್ರಮಗಳು ಏನು?

ಪೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಸರ್ಕಾರಿ ಶಾಲೆಯ 1 ರಿಂದ 7ನೇ ತರಗತಿ ಎಲ್ಲಾ ಮಕ್ಕಳಿಗೂ ಹಾಗೂ 8,9 ಮತ್ತು 10ನೇ ತರಗತಿಯ ಹೆಣ್ಣು ಮಕ್ಕಳಿಗೆ ಪಠ್ಯಪುಸ್ತಕಗಳನ್ನು ಉಚಿತವಾಗಿ ನೀಡಲಾಗುತ್ತದೆ.

ಆ) ರಾಜ್ಯದ ಎಲ್ಲಾ ಜಿಲ್ಲೆಗಳ ಉಚಿತ ವಿತರಣೆಯ ಒಟ್ಟು ಫಲಾನುಭವಿಗಳ ಸಂಖ್ಯೆ: 71.00 ಲಕ್ಷ. ಇದಕ್ಕೆ ತಗಲುವ ವೆಚ್ಚ ರೂ. 28.00 ಕೋಟಿ.

ಇ) ಉಚಿತ ವಿತರಣೆಯ ಎಲ್ಲಾ ಪಠ್ಯ ಪುಸ್ತಕಗಳು ಈಗಾಗಲೇ ಮುದ್ರಣವಾಗಿ ಎಲ್ಲಾ ಜಿಲ್ಲೆಗಳಿಗೂ ಸರಬರಾಜಾಗಿದೆ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಶವಗಳ ಮಾರಾಟ

4574 (4827) : ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಆರ್. ಆಸ್ಪತ್ರೆಯ ಶವಾಗಾರಕ್ಕೆ Post Mortem ಗಾಗಿ ಪ್ರತಿ ದಿವಸ ಬರುವ ಶವಗಳ ಸಂಖ್ಯೆ ಎಷ್ಟು;

ಆ) ಕಳೆದ ಒಂದು ವರ್ಷದಲ್ಲಿ ಶವಗಾರಕ್ಕೆ Post Martum ಗಾಗಿ ತರಲ್ಪಡುವ ಶವಗಳ ಪೈಕಿ ವಾರಸುದಾರರಿಲ್ಲದ ಅನಾಥ ಶವಗಳ ಸಂಖ್ಯೆ ಎಷ್ಟು;

ಇ) ಇತ್ತೀಚೆಗೆ ಶವಗಳನ್ನು ಮಾರಾಟ ಮಾಡುತ್ತಿದ್ದವರನ್ನು ಪೊಲೀಸರು ತನಿಖೆ–ಗೊಳಪಡಿಸಿದಾಗ ಈ ವ್ಯವಹಾರದಲ್ಲಿ ತೊಡಗಿರುವವರನ್ನು ಶಿಕ್ಷೆಗೊಳಪಡಿಸುವ ಬಗ್ಗೆ ಸರ್ಕಾರದ ಕ್ರಮಗಳೇನು;

ಈ) ಶವಗಳ ಲೆಕ್ಕ ನಿರ್ವಹಣೆ ಸಮರ್ಪಕವಾಗಿಸಲು ಅಗತ್ಯವಾಗಿ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು?

ಡಾ. ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು)

ಅ) ಸರಾಸರಿ ದಿನಕ್ಕೆ 3.

ಆ) 2002 ರಲ್ಲಿ – 93.

2003 ರಲ್ಲಿ ಇದುವರೆಗೆ–64.

ಇ) ಈ ಬಗ್ಗೆ ಪೊಲೀಸರು ಕ್ರಿಮಿನಲ್ ಕೇಸು ದಾಖಲಿಸಿರುತ್ತಾರೆ. ಪ್ರಕರಣ ವಿಚಾರಣೆ ಹಂತದಲ್ಲಿದೆ.

ಈ) ಪ್ರತಿದಿನ ಶವಗಾರಕ್ಕೆ ಬರುವ ಮತ್ತು ಹೊರಕ್ಕೆ ಹೋಗುವ ಶವಗಳನ್ನು ದಾಖಲಿಸಲು ಪ್ರತ್ಯೇಕವಾಗಿ ರಿಜಿಸ್ಟರನ್ನು ನಿರ್ವಹಿಸಲಾಗುತ್ತಿದೆ. ಈ ರಿಜಿಸ್ಟರನ್ನು ಪ್ರತಿದಿನವು ಪರೀಕ್ಷಿಸಿ, ದಾಸ್ತಾನಿನಲ್ಲಿರುವ ಶವಗಳನ್ನು ಪರೀಕ್ಷಿಸಿ ಶವಗಳನ್ನು ಪಡೆದವರ ವಿಳಾಸ, ಹೆಸರು ಮತ್ತು ಸಹಿ ಪಡೆಯಲಾಗುತ್ತದೆ. ಅನಾಥ ಶವಗಳನ್ನು ಪೊಲೀಸ್‌ನವರಿಗೆ ಅಥವಾ ಕಾಲೇಜಿಗೆ ನೀಡಿದಾಗ ಸಂಬಂಧಪಟ್ಟವರ ಸಹಿ ಪಡೆಯಲಾಗುತ್ತದೆ. ಶವಗಾರ ನಿರ್ವಹಣೆಯನ್ನು ಮತ್ತು ಮೇಲ್ವಿಚಾರಣೆಯನ್ನು ಬಿಗಿಗೊಳಿಸಲಾಗಿದೆ.

ಪಿ.ಎಂ.ಜಿ.ಎಸ್.ವೈ. ಯೋಜನೆ ಪ್ರಗತಿ

4576 (4085) : ಶ್ರೀ ಶಿವಶಂಕರ ರೆಡ್ಡಿ (ಗೌರಿಬಿದನೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಕಳೆದ ಎರಡು ವರ್ಷಗಳಲ್ಲಿ ಪಿ.ಎಂ.ಜಿ.ಎಸ್.ವೈ. ಯೋಜನೆಯಡಿಯಲ್ಲಿ ಜಿಲ್ಲಾವಾರು ಕಾಮಗಾರಿಗಳು ಎಲ್ಲೆಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಕಾರ್ಯಗತಗೊಂಡಿವೆ; ವಿವರ ನೀಡುವುದು;

2) ಈ ಕಾಮಗಾರಿಯು ಪೂರ್ಣಕೆಗೆ ಬಿಡುಗಡೆಯಾಗಿರುವ ಹಣವೆಷ್ಟು;